**4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ**

**ಎಸ್. ಸಿ. ನಂ. 27/2022**

ಪಿ ಡಬ್ಲ್ಯೂ: **2**

ಸಿ ಡಬ್ಲ್ಯೂ: **2**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹೇಶ |
| ತಂದೆಯ ಹೆಸರು | : | ಈರಾಜಿರಾವ್ ದವಳೆ |
| ವಯಸ್ಸು | : | 54 ವರ್ಷಗಳು |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ಧಾರವಾಡ |

ದಿನಾಂಕ:03-01-2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:

ಈಗ ಒಂದು ವರ್ಷದ ಹಿಂದೆ ಪೋಲೀಸರು ನಮ್ಮ ಮನೆಯ ಹತ್ತಿರ ಬಂದು ನನ್ನ ಸಹಿ ಮಾಡಿಸಿಕೊಂಡು ಹೋಗಿದ್ದಾರೆ. ನನ್ನ ಮನೆ ಧಾರವಾಡದ ಕೊರವರ ಓಣಿಯಲ್ಲಿ ಇದೆ. ಪೋಲೀಸರು ಸಾಕ್ಷಿಯಾಗಿ ಸಹಿ ಮಾಡು ಅಂತಾ ಹೇಳಿದರು, ಅದಕ್ಕೆ ಸಹಿ ಮಾಡಿದೆನು. ನನ್ನ ಸಹಿ ನೋಡಿದರೆ ಗುರ್ತಿಸುತ್ತೇನೆ. ಈಗ ನನಗೆ ತೋರಿಸುತ್ತಿರುವ ನಿಪಿ-2 ರಲ್ಲಿ ನನ್ನ ಸಹಿ ಇದೆ. ಸಾಕ್ಷಿ ಗುರ್ತಿಸಿದ ಅವರ ಸಹಿಯನ್ನು ನಿಪಿ-2(ಬಿ) ಅಂತಾ ಗುರ್ತಿಸಲಾಯಿತು. ಈಗ ನನಗೆ ತೋರಿಸುತ್ತಿರುವ ಪೋಟೋಗಳಲ್ಲಿ ನನ್ನ ಭಾವ ಚಿತ್ರ ಇದೆ. ಸದರಿ ಪೋಟೋಗಳನ್ನು ಈಗಾಗಲೇ ನಿಪಿ-3 ಮತ್ತು ನಿಪಿ-4 ಅಂತಾ ಗುರ್ತಿಸಲಾಗಿದೆ.

ನಿಪಿ-3 ಮತ್ತು ನಿಪಿ-4 ಗಳಲ್ಲಿ ಕಾಣುವ ಹುಡುಗಿ ನಮ್ಮ ಮನೆಯ ಹತ್ತಿರ ವಾಸ ಇದ್ದಾರೆ. ಸದರಿ ನಿಪಿ-3 ಮತ್ತು ನಿಪಿ-4 ಫೋಟೋಗಳನ್ನು ಆ ಹುಡುಗಿಯ ಮನೆಯಲ್ಲಿ ತೆಗೆದಿದ್ದಾರೆ, ಆಕೆಯ ಹೆಸರು ತನುಜಾ ಸುಣಗಾರ ಅಂತಾ ಇದೆ. ತನುಜಾಳಿಗೆ ಯಾವುದೂ ಹುಡುಗ ಚಾಕು ಹಾಕಿದ್ದಾನೆ ಅಂತಾ ಪೋಲೀಸ ಕೇಸ ಆಗಿತ್ತು, ಅದಕ್ಕಾಗಿ ಆ ಫೋಟೋಗಳನ್ನು ಪೋಲೀಸರು ತೆಗೆದಿದ್ದಾರೆ. ಪೋಲೀಸರು ತನುಜಾಳ ಮನೆಯಲ್ಲಿ ಪಂಚನಾಮೆ ಮಾಡಿದರು. ತನುಜಾಳ ಮನೆಯಲ್ಲಿ ಪೋಲೀಸರು ನನ್ನ ಸಹಿಯನ್ನು ಪಂಚನಾಮೆಗೆ ಮಾಡಿಸಿಕೊಂಡಿದ್ದಾರೆ.

(ಈ ಹಂತದಲ್ಲಿ ಭಾಗಶಃ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ:

ದಿನಾಂಕಃ22-02-2022 ರಂದು ತನುಜಾ ಸುಣಗಾರ ಇವಳಿಗೆ ಶಿವಶಂಕರ ಗರಗ ಇತನು ಚಾಕು ಹಾಕಿದ್ದಾನೆ ಅಂತಾ ತನುಜಾರವರು ತೋರಿಸಿದ ಜಾಗೆಯಲ್ಲಿ ಪೋಲೀಸರು ಪಂಚನಾಮೆ ಮಾಡಿದರು ಅಂದರೆ ಸರಿ. ಪೋಲೀಸರು ಘಟನಾ ಸ್ಥಳದಲ್ಲಿಯೆ ಪಂಚನಾಮೆ ಮಾಡಿ ನನ್ನ ಸಹಿ ಮಾಡಿಸಿಕೊಂಡರು ಅಂದರೆ ಸರಿ. ಘಟನಾ ಸ್ಥಳದ ಪಂಚನಾಮೆ ಮಾಡಿದ್ದಕ್ಕಾಗಿ

ಪೋಲೀಸರು ನಿಪಿ-3 ಮತ್ತು ನಿಪಿ-4 ಫೋಟೋಗಳನ್ನು ತೆಗೆದಿದ್ದಾರೆ ಅಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಐ.ಎಂ ವಕೀಲರಿಂದ:

ನನಗೆ ಆರೋಪಿಯ ಪರಿಚಯ ಇಲ್ಲ. ಪೋಲೀಸರು ಸಹಿ ಮಾಡು ಅಂತಾ ಅಂದಿದ್ದಕ್ಕೆ ಸಹಿ ಮಾಡಿದ್ದೇನೆ ಮತ್ತು ನನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ ಅಂದರೆ ಸರಿ.

ಮರು ವಿಚಾರಣೆ: ಇರುವುದಿಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಇದೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.